# ಟೆಂಟ್‌ನಲ್ಲಿ ಉದಯಿಸಿದ ತಾರೆ

■ ಪ್ರವೀಣ ಕುಲಕರ್ಣಿ



ಭಾರತ ಕಂಡ ಅಪ್ಪಟ ಮಾನವತಾವಾದಿ ಅಬ್ದುಲ್ ಕಲಾಂ ಯುವಪೀಳಿಗೆಯನ್ನು ಹುರಿದುಂಬಿಸಲು ಒಂದು ಮಾತು ಹೇಳುತ್ತಿದ್ದರು. ‘ದೊಡ್ಡ ಕನಸನ್ನೇ ಕಾಣಿರಿ. ಅದನ್ನು ನನಸಾಗಿಸಲು ಹಗಲಿರುಳು ಶ್ರಮ ಹಾಕಿರಿ. ಯಶಸ್ಸು ಸಾಧಿಸುವವರೆಗೆ ವಿಶ್ರಮಿಸಬೇಡಿರಿ’ ಎಂದು. ಭಾರತೀಯ ಕ್ರಿಕೆಟ್ ತಂಡದ ಅಸಾಮಾನ್ಯ ಆಟಗಾರ ಯಶಸ್ವಿ ಜೈಸ್ವಾಲ್ ಅಂತಹ ದೊಡ್ಡ ಕನಸನ್ನು ಪುಟ್ಟ ವಯಸ್ಸಿನಲ್ಲೇ ಕಂಡು, ಯಶಸ್ಸಿನ ಶಿಖರವೇರಿ ನಿಂತ ಸಾಧಕ. ತಮ್ಮಂತೆ ಸಮಾಜದ ಅಂಚಿನಲ್ಲಿರುವ ಪ್ರತಿಭೆಗಳಿಗೆ ಮುನ್ನುಗ್ಗುವ ಸ್ಫೂರ್ತಿಯನ್ನು ತುಂಬಬಲ್ಲಂತಹ ತಾರೆ.

ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಎರಡು ದ್ವಿಶತಕ ಗಳಿಸಿದ್ದಲ್ಲದೆ ಒಟ್ಟಾರೆ 600ಕ್ಕೂ ಹೆಚ್ಚು ರನ್ ಪೇರಿಸಿ, ಐಸಿಸಿ ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ 12ನೇ ಸ್ಥಾನಕ್ಕೆ ಜಿಗಿದಿರುವ ಜೈಸ್ವಾಲ್ ಅವರ ಯಾತ್ರೆ ಒಂದು ರೀತಿ ಪವಾಡದಂತಿದೆ. ಉತ್ತರಪ್ರದೇಶದ ಭಡೋಹಿಯ ಸಣ್ಣಅಂಗಡಿ ಮಾಲೀಕನ ಆರು ಮಕ್ಕಳಲ್ಲಿ ನಾಲ್ಕನೆಯವರಾದ ಜೈಸ್ವಾಲ್‌ಗೆ ಚಿಕ್ಕಂದಿನಿಂದಲೇ ಕ್ರಿಕೆಟ್ ಹುಚ್ಚು. ಜೈಸ್ವಾಲ್ ಅವರಲ್ಲಿ ಕ್ರಿಕೆಟ್ ಹುಚ್ಚು ಅದೆಷ್ಟು ಮಡುಗಟ್ಟಿತ್ತೆಂದರೆ 11ನೇ ವಯಸ್ಸಿನಲ್ಲಿ ಕ್ರಿಕೆಟ್‌ನಲ್ಲಿ ಭವಿಷ್ಯ ಅರಸಿ, ಚಿಕ್ಕಪ್ಪನ ಜೊತೆ ಅವರು ಮುಂಬೈಗೆ ಹೊರಟುನಿಂತರು. ಅಪ್ಪ–ಅಮ್ಮ ಬೇಡ ಎನ್ನಲಿಲ್ಲ. ಮುಂಬೈಗೆ ಬಂದ ಅವರು, ಊಟ ಸಂಪಾದಿಸಲು ಡೇರಿಯೊಂದರಲ್ಲಿ ಕೆಲಸಕ್ಕೆ ಸೇರಿಕೊಂಡರು. ರಾತ್ರಿ ಆ ಡೇರಿಯಲ್ಲೇ ವಾಸ್ತವ್ಯ. ‘ಈ ಹುಡುಗ ನಮ್ಮ ಕೆಲಸಕ್ಕೆ ನೆರವಾಗುವುದಕ್ಕಿಂತ ಹೆಚ್ಚಾಗಿ, ಕ್ರಿಕೆಟ್ ಮೈದಾನದಲ್ಲೇ ಹೆಚ್ಚು ಸಮಯ ಕಳೆಯುತ್ತಾನೆ’ ಎಂದು ಡೇರಿ ಮಾಲೀಕ ಒಂದು ದಿನ ಜೈಸ್ವಾಲ್ ಅವರನ್ನು, ಅವರ ಬ್ಯಾಗ್‌ಸಹಿತ ಹೊರಹಾಕಿ ಬಿಟ್ಟರು.

ಆಮೇಲೆ ಅವರ ಕೈ ಹಿಡಿದಿದ್ದು ಮುಸ್ಲಿಂ ಯುನೈಟೆಡ್ ಕ್ಲಬ್. ಆಜಾದ್ ಮೈದಾನದಲ್ಲಿ ಕೆಲಸ ಮಾಡುವವರ ಜೊತೆ ಟೆಂಟ್‌ನಲ್ಲಿಯೇ ವಾಸಕ್ಕೆ ಅವರಿಗೆ ಅವಕಾಶ ನೀಡಲಾಯಿತು. ಅದಕ್ಕೇ ಜೈಸ್ವಾಲ್ ಈಗ ತಮಾಷೆ ಧಾಟಿಯಲ್ಲಿ ಹೀಗೆ ಹೇಳುವುದುಂಟು: ಪ್ರತಿ ದಿನವೂ ನಮಗೆ ಕ್ಯಾಂಡಲ್ ಲೈಟ್ ಡಿನ್ನರ್. ಯಾಕೆಂದರೆ, ನಾವು ಇದ್ದ ಟೆಂಟ್‌ನಲ್ಲಿ ವಿದ್ಯುದ್ದೀಪವೇ ಇರಲಿಲ್ಲ.’ ಅವರ ಈ ಮಾತಿನ ಹಿಂದೆ ಬಡತನದ ಕ್ರೂರ ವ್ಯಂಗ್ಯ ಇದೆ. ಅದನ್ನು ಮೆಟ್ಟಿ ನಿಂತ ಇಂದಿನ ಅವರ ಯಶೋಗಾಥೆಗೂ ಆ ಕಹಿ ನೆನಪುಗಳನ್ನು ಅಳಿಸುವ ಶಕ್ತಿ ಇಲ್ಲ. ಹೌದು, ಅವರದು ಮೂರು ವರ್ಷಗಳ ‘ಕ್ಯಾಂಡಲ್ ಲೈಟ್ ಡಿನ್ನರ್’. ಅಷ್ಟೇ ಅಲ್ಲ, ಟೆಂಟ್‌ನಲ್ಲಿದ್ದ ಕಾರ್ಮಿಕರು ಪರಸ್ಪರ ಜಗಳ ಆಡಿಕೊಂಡರೆ ಆ ಡಿನ್ನರ್ ಕೂಡ ಇರುತ್ತಿರಲಿಲ್ಲ. ರಾತ್ರಿ ಹೊತ್ತು ಶೌಚಕ್ಕೆ ಹೋಗಲೂ ಅಲ್ಲಿ ಸಾಧ್ಯವಿರಲಿಲ್ಲ. ಯಾಕೆಂದರೆ, ಮೈದಾನಕ್ಕೆ ಹೊಂದಿಕೊಂಡಂತೆ ಇದ್ದ ಶೌಚಾಲಯಕ್ಕೆ ಸಂಜೆಯಿಂದ ಬೆಳಗಿನವರೆಗೆ ಬೀಗ ಬಿದ್ದಿರುತ್ತಿತ್ತು. ಹೀಗಿದ್ದೂ ಜೈಸ್ವಾಲ್, ಅವರ ಅಮ್ಮನಿಗೆ ಹೇಳಿದ ಮಾತು ನೋಡಿ: ‘ನಾನೀಗ ಯಾವಾಗಲೂ ಮೈದಾನದಲ್ಲೇ ಇರುವುದರಿಂದ ಕ್ರಿಕೆಟ್ ಕಲಿಯುವುದು ತುಂಬಾ ಸಲೀಸಾಗುತ್ತಿದೆ. ಇಲ್ಲಿ ನಾನು ಬೆಳಿಗ್ಗೆ ಎದ್ದು ಕಣ್ಣುಬಿಟ್ಟ ತಕ್ಷಣ ನನ್ನ ಮುಂದೆ ಕ್ರಿಕೆಟ್ ಆಟವೇ ನಡೆದಿರುತ್ತದೆ ಅಮ್ಮಾ.’ ಕ್ರಿಕೆಟ್ ಪ್ರೀತಿಯ ಮುಂದೆ ಈ ಹುಡುಗನಿಗೆ ಉಳಿದ ಯಾವ ತೊಂದರೆಗಳೂ ಲೆಕ್ಕಕ್ಕೆ ಇರಲಿಲ್ಲ.

ಅಪ್ಪ ಕಳಿಸುತ್ತಿದ್ದ ಅಲ್ಪ ಮೊತ್ತ ಸಾಕಾಗದಿದ್ದಾಗ ಮತ್ತೆ ಹಣಕ್ಕಾಗಿ ಅವರನ್ನು ಪೀಡಿಸದೆ, ಹಣ ಹೊಂದಿಸಲು ಅವರು ಕಂಡುಕೊಂಡಿದ್ದ ದಾರಿ ಪಾನಿಪೂರಿ ಮಾರುವುದು. ಅಲ್ಲಿಗೆ ಬಂದ ತಂಡದ ಪರಿಚಿತರಿಗೆ ಪಾನಿಪೂರಿ ಕೊಟ್ಟು, ‘ದಯವಿಟ್ಟು ಈ ವಿಷಯವನ್ನು ಯಾರಿಗೂ ಹೇಳಬೇಡಿ ಪ್ಲೀಸ್. ಅವರು ನನ್ನನ್ನು ಕಾಣುವ ದೃಷ್ಟಿಯೇ ಬೇರೆಯಾಗುತ್ತದೆ’ ಎಂದು ಬೇಡಿಕೊಳ್ಳುತ್ತಿದ್ದರಂತೆ.

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಮುಂಬೈ ತಂಡದ ಪರವಾಗಿ ಬರೀ 154 ಎಸೆತಗಳಲ್ಲಿ 203 ರನ್ ಗಳಿಸಿ ವಿಶ್ವ ದಾಖಲೆ ಬರೆಯಲು ‘ಯಶಸ್ವಿ’ಯಾದ ಈ ಬ್ಯಾಟ್ಸ್‌ಮನ್ ಮತ್ತೆ ಹಿಂದಿರುಗಿ ನೋಡಿದ್ದೇ ಇಲ್ಲ. ಆಡಿದ ಎಲ್ಲ ಟೂರ್ನಿಗಳಲ್ಲೂ ಹೆಜ್ಜೆ ಗುರುತುಗಳನ್ನು ಮೂಡಿಸುತ್ತಲೇ ಬಂದವರು. ಏನೇ ಕಷ್ಟಗಳು ಎದುರಾದರೂ ಕ್ರಿಕೆಟ್‌ಗೆ ಅವರು ತೋರುತ್ತಾ ಬಂದ ಬದ್ಧತೆ ಅಮೋಘವಾದುದು. ಕಷ್ಟದ ಕೋಟಲೆಗಳನ್ನು ಲೆಕ್ಕಿಸದೆ ಆಟದಲ್ಲಿ ಮೇರು ಎತ್ತರಕ್ಕೆ ಬೆಳೆಯಬೇಕು ಎನ್ನುವ ಅವರ ಛಲ, ಕ್ರಿಕೆಟ್‌ನಲ್ಲಿ ಅವರನ್ನು ತಪಸ್ವಿನಂತೆ ತೊಡಗಿಕೊಳ್ಳುವಂತೆ ಮಾಡಿತ್ತು.

ಜೈಸ್ವಾಲ್ ಅವರೊಳಗಿನ ಪ್ರತಿಭೆಯನ್ನು ಗುರ್ತಿಸಿದ ಮೊದಲಿಗರು ಕೋಚ್ ಜ್ವಾಲಾ ಸಿಂಗ್. ‘ನಾನೊಮ್ಮೆ ನೆಟ್ಸ್ ಹಿಂದೆ ನಿಂತು ಬ್ಯಾಟ್ಸ್‌ಮನ್‌ಗಳ ಅಭ್ಯಾಸವನ್ನು ನೋಡುತ್ತಿದ್ದೆ. ಅದೊಂದು ಬ್ಯಾಟ್ಸ್‌ಮನ್‌ಗಳ ಪಾಲಿಗೆ ಕಠಿಣ ಎನಿಸುವಂತಹ ಪಿಚ್ ಆಗಿತ್ತು. ಉಳಿದ ಆಟಗಾರರು ಬ್ಯಾಟಿಂಗ್ ಮಾಡಲು ಪರದಾಡುತ್ತಿದ್ದರೆ, ಜೈಸ್ವಾಲ್ ಮಾತ್ರ ಸರಾಗವಾಗಿ ಬ್ಯಾಟ್ ಬೀಸುತ್ತಿದ್ದ. ಆತನ ಪ್ರದರ್ಶನದಿಂದ ಉತ್ತೇಜಿತನಾಗಿ ಅಭ್ಯಾಸ ಮುಗಿದ ತಕ್ಷಣ ಆತನೊಂದಿಗೆ ಮಾತನಾಡಿದೆ’ ಎಂದು ಜ್ವಾಲಾ ಸಿಂಗ್ ನೆನೆಯುತ್ತಾರೆ. ‘ಪ್ರತಿಕೂಲ ಸನ್ನಿವೇಶವು ನನ್ನನ್ನು ಕ್ರಿಕೆಟ್‌ನಿಂದ ದೂರ ಸರಿಯುವಂತೆ ಮಾಡುತ್ತಿದೆ’ ಎಂದು ಜೈಸ್ವಾಲ್ ಅಸಹಾಯಕತೆ ವ್ಯಕ್ತಪಡಿಸಿದ್ದರಂತೆ. ಜ್ವಾಲಾ ಸಿಂಗ್, ತಮ್ಮಲ್ಲಿಯೇ ಈ ಪ್ರತಿಭೆಗೆ ಆಶ್ರಯ ನೀಡಿ ಬೆಳೆಸಿದರು. ಶಾಲಾ ಕ್ರಿಕೆಟ್‌ನಲ್ಲಿ 52 ಶತಕ ಬಾರಿಸಿದ್ದಲ್ಲದೆ, 200 ವಿಕೆಟ್ ಗಳಿಸಿದ ಸಾಧನೆಯೂ ಜೈಸ್ವಾಲ್ ಅವರದ್ದಾಗಿತ್ತು. ಮುಂದೆ ಮುಂಬೈ ರಣಜಿ ತಂಡದಲ್ಲಿ ಸ್ಥಾನ ಪಡೆದಿದ್ದು, 19 ವರ್ಷದೊಳಗಿನ ಭಾರತೀಯ ತಂಡಕ್ಕೆ ಆಯ್ಕೆಯಾಗಿದ್ದು, ಅಲ್ಲಿ ಸಾಧನೆ ಮೆರೆದಿದ್ದು ಈಗ ಇತಿಹಾಸ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65